


ಎಡದಿಂದ ಬಲಕ್ಕೆ

1. ವಿಷಾದವೇನೆಂದರೆ ಅವರೆಲ್ಲರಿಗೂ ಇಷ್ಟವಾದದ್ದು ಅನ್ಯ ರಾಷ್ಟ್ರ 3
3. ವಾರಕ್ಕೂ ಮೊದಲೇ ವಾಪಸ್ಸಾದ ಆತನ ಪುತ್ರ 3
4. ಬಂದವರಿಗೆಲ್ಲ ಪ್ರಿಯವಾಗುವ ಹಿಮಾಲಯದ ಪುಣ್ಯಕ್ಷೇತ್ರ 3
6. ಬಾಕಿ ವಸೂಲಿ ಮಾಡುವ ಕ್ರಮ 'ಹೆದರಿಕೆ ಬರಿಸುವಂತಹದು' 4
7. ಮುಂಜಾಗ್ರತೆ ಇಲ್ಲದ ಅಚಾತುರ್ಯದಿಂದ ಭಾರೀ ಇರುಸು ಮುರುಸು 4
9. ನೂರು ಸಾವಿರ ಜನರಲ್ಲೊಬ್ಬ ಇದ್ದಾನು ಇಂಥ ಶೂರ ಮನುಷ್ಯ 4
11. ರಾಮಾಯಣದಂತೆಯೇ ಪ್ರಸಿದ್ಧ ಪದ ; ಖಚಿತ ಪರಿಹಾರ ಎಂಬ ಅರ್ಥ 4
15. ಕಂಡವರನ್ನೆಲ್ಲ ಬೆರಗುಗೊಳಿಸೀತು ಈ ಬೃಹತ್ ಹಂಡೆ! 3
16. ವಿರೋಧವೇನೂ ಇಲ್ಲದ್ದರಿಂದ ಸಾಧ್ಯವಾಯಿತು ಇಂಥ ಅಭಿವೃದ್ಧಿ 3
17. ಒಪ್ಪಿಗೆಯನ್ನು ಪಡೆಯದೆ ಪ್ರವೇಶವೇ ಇಲ್ಲದ ಕಾಡು 3

ಮೇಲಿನಿಂದ ಕೆಳಕ್ಕೆ

1. ಪರಿಹಾರವಿಲ್ಲ; ಅದಕ್ಕೇ ಈ ಅಗಲಿಕೆ 3
2. ಬೇಷರತ್ತಾಗಿ ಸಹಾಯಕ್ಕೆ ಬಂದಾತ ಒಬ್ಬ ಬೇಟೆಗಾರ, ಬೇಡ 3
3. ಕಲಹಕ್ಕೆ ದಾರಿ ಮಾಡಿದ್ದು ಆಕೆಯ ವ್ಯಂಗ್ಯ ನುಡಿ 3
5. ವಾರಿಜಾಕ್ಷಿಯನ್ನು ಪೂಜಿಸುವುದು ಅಲ್ಲಿನ ಸಂಪ್ರದಾಯ 3
6. ಬೇವಿನ ಮರವನ್ನಷ್ಟೇ ಬಳಸಿ ನಿರ್ಮಿಸಿರುವ ಭಾರೀ ಮನೆ ಇದು 3
8. ಸುಂದರ ಮೇಣದರಮನೆಯನ್ನು ನಿರ್ಮಿಸಿದ್ದು ಆಕೆಯ ಗಂಡ 3
10. ವೇಷಕ್ಕೆ ತಕ್ಕ ನಡವಳಿಕೆ ಇದೆಯೇ ಗಮನಿಸುವವ 3
12. ಮೂರ್ತಿಯನ್ನು ಪೂಜಿಸುವ ವಸ್ತುವಿಗಾಗಿ ಕಡೆದು ತೆಗೆಯುವ ಕೆಲಸವೇ? 3
13. ಆಹಾರವಿರಿಸಲು ಕೂಡ ತಕ್ಕದ್ದಾಗಿದೆ ಈ ಮಣ್ಣಿನ ಪಾತ್ರೆ 3
14. ಭವ್ಯವಾದದ್ದೇನೇ ಇರಲಿ, ಅದನ್ನೆಲ್ಲ ಮೀರಿಸಿದ್ದು ಈ ಭೂಮಿ 3

---

## 10–2–2022 ಉತ್ತರಗಳು

ಎಡದಿಂದ ಬಲಕ್ಕೆ

1. ಸಾಮೂಹಿಕ 3. ವ್ಯಾಪಾರ 4. ರಾಹುತ 6. ಚಲಪತಿ 7. ತಿಲಾಂಜಲಿ 9. ಸುಲಭಿಸು 12. ಸರೋವರ 14. ಮುರುಗ 15. ಬಳಿಕ 16. ತಿಲತೈಲ

ಮೇಲಿನಿಂದ ಕೆಳಕ್ಕೆ

1. ಸಾರಮತಿ 2. ಕರಾಮತಿ 3. ವ್ಯಾಕುಲ 5. ತನುಜ 6. ಚದರಿಸು 8. ಲಿಪಿಕಾರ 10. ಲಗಾಮು 11. ಸುಪ್ರಗತಿ 12. ಸಮಬಲ 13. ವರ್ತಕ

ಪ್ರಶ್ನಾಂಕಣ

# ಐಸ್ ಬರ್ಗ್; ವಿಶ್ವ ದಾಖಲೆ ಏನು?

ಸಾಗರಗಳಲ್ಲಿ ತೇಲುತ್ತಲಿರುವ ಮಂಜುಗೆಡ್ಡೆಯ 'ಬೆಟ್ಟಗುಡ್ಡ'ಗಳೇ ಐಸ್ ಬರ್ಗ್‌ಗಳು. ಆರ್ಕ್ಟಿಕ್ ಮತ್ತು ಅಂಟಾರ್ಕ್ಟಿಕಾದ ಕಡಲಂಚುಗಳೇ ಬಹುಪಾಲು ಸಕಲ ಐಸ್ ಬರ್ಗ್ ಜನನದ ತಾಣಗಳು. ಆ ಪ್ರದೇಶಗಳ ಶಾಶ್ವತ ನೀರ್ಗಲ್ಲ ಬೃಹದ್ರಾಶಿಗಳನ್ನು ಅಲೆಗಳು ನಿರಂತರ ಅಪ್ಪಳಿಸುತ್ತವೆ. ಕಡಲಿನ ಬೆಚ್ಚನೆಯ ನೀರು ಹಾಗೂ ವಾಯುಮಂಡಲದ ತಾಪ ಹೆಚ್ಚಳ ಕೂಡ ಅದೇ ಹಿಮಹಾಸುಗಳನ್ನು ಕರಗಿಸಲು ಯತ್ನಿಸುತ್ತಲೇ ಇರುತ್ತವೆ. ಹಾಗಾಗಿ ಗಗನಚುಂಬಿಗಳಂತಹ ಹಿಮ ಚಪ್ಪಡಿಗಳ ಅಂಚುಗಳು ದುರ್ಬಲಗೊಳ್ಳುತ್ತ ಅಲ್ಲಲ್ಲಿ ಬಿರುಕು ಬಿಟ್ಟು ಕಡೆಗೊಮ್ಮೆ ಮುರಿದು ಸಿಡಿಲಿನಂಥ ಸಪ್ಪಳದೊಡನೆ ಕಡಲಿಗೆ ಬೀಳುತ್ತವೆ; ಎಷ್ಟೇ ದೊಡ್ಡ ತುಂಡಾದರೂ ಕಡಲ ನೀರಲ್ಲಿ ತೇಲುತ್ತವೆ; ಸಾಗರ ಪ್ರವಾಹಗಳ ಜೊತೆಜೊತೆಗೇ ನಿಧಾನವಾಗಿ ಸಾಗತೊಡಗುತ್ತವೆ.

ಐಸ್ ಬರ್ಗ್‌ಗಳದು ಚಿತ್ರ ವಿಚಿತ್ರ ಆಕಾರ; ಕಲ್ಪನಾತೀತ ಗಾತ್ರ (ಚಿತ್ರಗಳಲ್ಲಿ ಗಮನಿಸಿ). ಯಾವುದೇ ಸಾಧಾರಣ ಐಸ್ ಬರ್ಗ್ ಕೂಡ ನೀರಿನ ಹೊರಗೆ ನೂರಾರು ಅಡಿ ಎತ್ತರ ಇರುತ್ತವೆ; ಸಾವಿರಾರು ಟನ್ ತೂಕ ಇರುತ್ತವೆ. ಕಡಲಲ್ಲಿ ತೇಲುತ್ತ, ಚಲಿಸುತ್ತ ಜೊತೆಗೇ ನಿಧಾನವಾಗಿ ಕರಗುತ್ತ, ಆಕಾರ ಬದಲಿಸುತ್ತ, ಕ್ರಮೇಣ ಕರಗುತ್ತ ಕಡೆಗೆ ಕಣ್ಮರೆಯಾಗುತ್ತವೆ. ಮಂಜುಗೆಡ್ಡೆಯ ಸಾಪೇಕ್ಷ ಸಾಂದ್ರತೆ 0.9; ನೀರಿನದು 1. ಆದ್ದರಿಂದಲೇ ಯಾವುದೇ ಐಸ್ ಬರ್ಗ್ ನ ಶೇಕಡ 10 ಭಾಗ ಮಾತ್ರ ನೀರಿನಿಂದ ಹೊರಗೆ ಗೋಚರಿಸುತ್ತದೆ; ಉಳಿದ ಶೇಕಡ 90 ಭಾಗ ನೀರಿನೊಳಗೆ ಮುಳುಗಿ ಅಗೋಚರವಾಗಿರುತ್ತದೆ. ಅಪರೂಪವಾಗಿ ಹೀಗೆ ಮೈದಾಳುವ ಐಸ್ ಬರ್ಗ್‌ಗಳು ಕಲ್ಪನಾತೀತ ಅಳತೆಗಳನ್ನು ಹೊಂದಿರುತ್ತವೆ. ಅಂತಹ ಮಹಾನ್ ಐಸ್ ಬರ್ಗ್‌ಳಲ್ಲೆಲ್ಲ ಗರಿಷ್ಠ ಅಳತೆಗಳ ವಿಶ್ವದಾಖಲೆಯನ್ನು ಸ್ಥಾಪಿಸಿರುವ ಐಸ್ ಬರ್ಗ್ ನ ಅಚ್ಚರಿಯ ಅಂಶಗಳು:




2000ದ ಮಾರ್ಚ್ ತಿಂಗಳಲ್ಲಿ ಅಂಟಾರ್ಕ್ಟಿಕಾದ 'ರಾಸ್ ಐಸ್ ಶೆಲ್ಫ್'ನಿಂದ ಕಳಚಿ ಕಡಲಿಗಿಳಿದ ಐಸ್ ಬರ್ಗ್ "ಬಿ15" ರ ದಾಖಲೆಗಳು ಈ ವರೆಗೂ ಅದ್ವಿತೀಯ. ಆ ಐಸ್ ಬರ್ಗ್ ಉದ್ದ 295 ಕಿಲೋಮೀಟರ್ ಮತ್ತು ಅಗಲ 37 ಕಿಲೋ ಮೀಟರ್ ಇತ್ತು (ವಿಸ್ತೀರ್ಣ 11,000 ಚದರ ಕಿಲೋ ಮೀ) ನೀರಿನ ಹೊರಗೆ 551 ಅಡಿ ಎತ್ತರ ಇದ್ದ (55 ಮಹಡಿಗಳ ಕಟ್ಟಡದಷ್ಟು ಎತ್ತರ) ಇದ್ದ ಆ ಐಸ್ ಬರ್ಗ್ ನ ಒಟ್ಟು ಗಾತ್ರ 18,340 ಘನ ಕಿಲೋ ಮೀಟರ್! ಎಂದರೆ ಅದರಲ್ಲಿ ಅಡಕವಾಗಿದ್ದ ನೀರಿನ ಮೊತ್ತ 18,340 ಶತ ಕೋಟಿ ಲೀಟರ್! ಅಷ್ಟೇ ಅಲ್ಲ, 2021ರ ಅಂತ್ಯದಲ್ಲೂ ಅದು ಇನ್ನೂ ಪೂರ್ಣ ಕರಗಿರಲಿಲ್ಲ! ಎಂಥ ದಾಖಲೆ! ಎಂಥ ವಿಸ್ಮಯ!

■ ಎನ್. ವಾಸುದೇವ್